ಓ.ಎಸ್. ನಂಃ 260/2020

**ಡಿ. ಡಬ್ಲ್ಯೂಃ 2**

**ದಿನಾಂಕ 03.12.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಬಿ.ಕೆ.ಪಿ. ಎಲ್ವಕೀಲರಿಂದಃ**

5. ವಾದಿಯು ಎಷ್ಟು ಅಡಿ ವಿಸ್ತೀರ್ಣದಲ್ಲಿ ತಮ್ಮ ಮನೆಯನ್ನು ಕಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎಷ್ಟು ಅಡಿ ಜಾಗವನ್ನು ಬಿಟ್ಟು ವಾದಿ ತಮ್ಮ ಮನೆಯನ್ನು ಕಟ್ಟಿರುತ್ತಾರೆ ಎಂದು ನಿಮಗೆ ಗೊತ್ತಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಿಯು ಯಾವುದೇ ಜಾಗವನ್ನು ಬಿಡದೇ ತಮ್ಮ ಪೂರ್ತಿ ಜಾಗದಲ್ಲಿ ಮನೆಯನ್ನು ಕಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ತಮ್ಮ ಮನೆಯ ಹಿಂಬದಿಯಲ್ಲಿ 9 ½ ಅಡಿ ಜಾಗವನ್ನು ಬಿಟ್ಟು ವಾದಿ ತಮ್ಮ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ.

6. ವಾದಿಯು 1ನೇ ಪ್ರತಿವಾದಿಗೆ ಸೇರಿದ ಎಷ್ಟು ಅಡಿ ವಿಸ್ತೀರ್ಣದ ಜಾಗವನ್ನು ಒತ್ತುವರಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ತಮ್ಮ ಮನೆಯ ಹಿಂಬದಿಯಲ್ಲಿ 9 ½ ಅಡಿ ಜಾಗವನ್ನು ಬಿಟ್ಟು ವಾದಿ ತಮ್ಮ ಮನೆಯನ್ನು ಕಟ್ಟಿರುದ್ದರು ಸಹ ವಾದಿಯು 1ನೇ ಪ್ರತಿವಾದಿಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯು ತಮ್ಮ ಡಿಮಾಂಡ್ ರಿಜಿಸ್ಟರ್ ನಲ್ಲಿ ನಮೂದಾಗಿರುದಕ್ಕಿಂತ ಹೆಚ್ಚಿನ ವಿಸ್ತೀರ್ಣದ ಜಾಗದಲ್ಲಿ ಮನೆಯನ್ನು ಕಟ್ಟಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. ನಾನು ಹೇಳಿದ ಹಾಗೆ ದಾವಾ ಆಸ್ತಿ ಅಕ್ಕ-ಪಕ್ಕದಲ್ಲಿ 1 ನೇ ಪ್ರತಿವಾದಿಗೆ ಸೇರಿದ ಯಾವುದೇ ಜಾಗ ಇಲ್ಲದಿದ್ದರು ಸಹ ವಾದಿಯು 1ನೇ ಪ್ರತಿವಾದಿಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ವಾದಿಯು 1ನೇ ಪ್ರತಿವಾದಿಗೆ ಸೇರಿದ 6 ಅಡಿ ಜಾಗವನ್ನು ಒತ್ತುವರಿ ಮಾಡಿರುತ್ತಾರೆ ಎಂದು ತೋರಿಸಲು ಯಾವುದಾದರು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ

ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಮಮತಾ ಮತ್ತು 1 ನೇ ಪ್ರತಿವಾದಿಗಳ ಮಧ್ಯೆ ಒಂದು ಓಣಿ ಇದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು 1 ನೇ ಪ್ರತಿವಾದಿಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**